ಕರ್ನಾಟಕ ಸರಕಾರ

ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ/ಕಂ/ಪಹಣಿ/ಕಂ ಗೈ/96/2014-15

ದಿನಾಂಕ 09-07-2015

ಉಪಸ್ಥಿತರು:- ಹೆಚ್ ವಿಶ್ವನಾಥ್, ಹೂವಿನಹಡಗಲಿ

| ಅರ್ಜಿದಾರರು/ವಾದಿಗಳು | ತಕರಾರುದಾರರು/ಎದುರುದಾರರು |
|---|---|
| 1)ಬಾರಿಕರ ಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ<br>2)ಬಾರಿಕರ ದೇವಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ<br>3)ಬಾರಿಕರ ದೊಡ್ಡಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ<br>ಹಿರೇಮಲ್ಲನಕೇರಿ | ಕಂದಾಯ ನಿರೀಕ್ಷಕರು ಇಟ್ಟಿಗಿ |

ವಿವಾದಿತ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ |
|---|---|---|
| 63 ತಿಮ್ಮಲಾಪುರ | 420 ಎ/1 | 2.03 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಗಳು ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿನಾಂಕ 09/01/2015ರಂದು ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಅರ್ಜಿ ಮೇರೆಗೆ ನಮೂನೆ 21ನ್ನು ತಯಾರಿಸಲಾಗಿದ್ದು, ಗ್ರಾಮಲೆಕ್ಕಾಧಿಕಾರಿಗಳು 63 ತಿಮ್ಮಲಾಪುರಇವರು ನಮೂನೆ 21ನ್ನು ಜಾರಿಮಾಡಲಾಗಿದ್ದು ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ, ಆದರೆ ಅರ್ಜಿದಾರರು ಪೋತಿದಾರರ ಮರಣ ಪ್ರಮಾಣ ಪತ್ರ ಲಗತ್ತಿಸಿರುವುದಿಲ್ಲವೆಂದು ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಠಿಯಿಂದ ವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 07/05/2015ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಪ್ರಕರಣಕ್ಕೆ ಸಂಭಂದಿಸಿದಂತೆ ವಾದಿಗಳಿಗೆ ನೋಟಿಸ್ ನೀಡಲಾಗಿ ದಿನಾಂಕ 09/07/2015ರಂದು ವಾದಿಗಳಾದ 1)ಬಾರಿಕರ ಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ 2)ಬಾರಿಕರ ದೇವಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ 3)ಬಾರಿಕರ ದೊಡ್ಡಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ ಹಿರೇಮಲ್ಲನಕೇರಿ ಇವರು ಹಾಜರಾಗಿರುತ್ತಾರೆ ಹಾಗೂ ಕಂದಾಯ ನೀರಿಕ್ಷಕರು, ಇಟ್ಟಿಗಿ ಇವರು ಹಾಜರಿರುತ್ತಾರೆ. ಹಾಗೂ ಹಾಲಿ ಪಟ್ಟಾದಾರರು ಮೃತರಾಗಿದ್ದು, ಮೃತರ ವ್ಯಕ್ತಿಗೆ 3 ಜನ ಮಕ್ಕಳಿದ್ದು ಅವರ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ. ಅಂತೆಯೇ ದಾಖಲೆ ಪ್ರಕಾರ ಅರ್ಜಿದಾರರ ಕೋರಿಕೆಮೇರೆಗೆ ಈ ಕೆಳಗಿನಂತೆ ಆದೇಶಿಸಿದೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ಹಿನ್ನೆಲೆ, ಕಾರಣಗಳಿಂದಾಗಿ 63 ತಿಮ್ಮಲಾಪುರ ಗ್ರಾಮದ ಸರ್ವೆ ನಂಬರ್ 420ಎ/1 ವಿಸ್ತೀರ್ಣ 2.03ರಲ್ಲಿ ಪೋತಿವಾರಸ ಪ್ರಕಾರ ಪೋತಿಪಟ್ಟಾದಾರರಾದ ಬಾರಿಕರ ಹನುಮಂತಪ್ಪ ತಂದೆ ಗೋಣೆಪ್ಪ ಇವರ ಹೆಸರು ತೆಗೆದು ವಾದಿಗಳಾದ 1)ಬಾರಿಕರ ಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ 2)ಬಾರಿಕರ ದೇವಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ 3)ಬಾರಿಕರ ದೊಡ್ಡಬಸಪ್ಪ ತಂದೆ ಲೇಟ್ ಬಾರಿಕರ ಹನುಮಂತಪ್ಪ ಹಿರೇಮಲ್ಲನಕೇರಿ ಇವರ ಹೆಸರಿಗೆ ಜಂಟಿಯಾಗಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬರೆದು ಬೆರಳಚ್ಚು ಮಾಡಿ ದಿನಾಂಕ:- 09-07-2015 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನ ಹಡಗಲಿ

ಗೆ,

1) ಪ್ರತಿಯನ್ನು ವಾದಿ/ಪ್ರತಿವಾದಿಗಳು ಹಾಗೂ ಅವರ ಪರ ನ್ಯಾಯಾವಾದಿಗಳು ರವರಿಗೆ.
2) ಭೂಮಿ ಕೇಂದ್ರಕ್ಕೆ ಮುಂದಿನ ಕ್ರಮಕ್ಕೆ.